144ನೇ ಅಧಿವೇಶನ

ನಿ-72
ಕ್ರಮ ಸಂಖ್ಯೆ -165
ಕ್ರ.165

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 176 ಸಿಸಿಬಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:28.12.2021

**ಇವರಿಂದ,**

**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
ಸಹಕಾರ ಇಲಾಖೆ,
ಬೆಂಗಳೂರು – 560 001.

**ಇವರಿಗೆ,**

**ಕಾರ್ಯದರ್ಶಿ,**
ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ
ವಿಧಾನಸೌಧ,
ಬೆಂಗಳೂರು.

**ಮಾನ್ಯರೇ,**

**ವಿಷಯ:** ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಗೋವಿಂದರಾಜು, ಶ್ರೀ ಕೆ.ಎ ತಿಪ್ಪೇಸ್ವಾಮಿ, ಶ್ರೀ ಚಿದಾನಂದ ಎಂ. ಗೌಡ ಹಾಗೂ ಶ್ರೀ ಮುನಿರಾಜುಗೌಡ ಇವರುಗಳು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಬಗ್ಗೆ.

**ಉಲ್ಲೇಖ:** ತಮ್ಮ ಕಛೇರಿ ಪತ್ರ ಸಂಖ್ಯೆ: ಕವಿಪ/ಪ್ರಶಾ/165/144ನೇಅ/ನಿ–72/2021, ದಿ:21.09.2021

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಗೋವಿಂದರಾಜು, ಶ್ರೀ ಕೆ.ಎ ತಿಪ್ಪೇಸ್ವಾಮಿ, ಶ್ರೀ ಚಿದಾನಂದ ಎಂ. ಗೌಡ ಹಾಗೂ ಶ್ರೀ ಮುನಿರಾಜುಗೌಡ ಇವರುಗಳು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಉತ್ತರದ 05 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha H.C 28/12

**(ರಾಧ. ಹೆಚ್.ಸಿ.)**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ. ಗೋವಿಂದರಾಜು, ಶ್ರೀ.ಕೆ.ಎ.ತಿಪ್ಪೇಸ್ವಾಮಿ, ಶ್ರೀ.ಚಿದಾನಂದ ಎಂ. ಗೌಡ ಹಾಗೂ ಶ್ರೀ.ಮುನಿರಾಜುಗೌಡ ಇವರುಗಳು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

## ಸೂಚನೆ

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ಡಿ.ಸಿ.ಸಿ ಬ್ಯಾಂಕಿಗೆ 1998-99ನೇ ಸಾಲಿನಲ್ಲಿ ಆಡಳಿತ ಮಂಡಳಿಯವರು ವಿವಿಧ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಅಕ್ರಮವಾಗಿ ನೇಮಕಾತಿ ಮಾಡುವುದರಲ್ಲಿ ಅವ್ಯವಹಾರ ನಡೆದಿದ್ದು ಅಕ್ರಮವಾಗಿ ನೇಮಕಾತಿಯ ಬಗ್ಗೆ ಕ್ರಮ ಜರುಗಿಸಲು 2019-20ನೇ ಸಾಲಿನಲ್ಲಿ ಆಡಳಿತ ಮಂಡಳಿಗೆ ಸರ್ಕಾರದ ನಿರ್ದೇಶನ ನೀಡಿದ್ದು, ಇದುವರೆವಿಗೂ ಯಾವುದೇ ಕ್ರಮ ಜರುಗಿಸದಿರುವ ಬಗ್ಗೆ ಹಾಗೂ ಸರ್ಕಾರದಿಂದ ಹೆಚ್ಚು ಬಡ್ಡಿಯನ್ನು ವಸೂಲು ಮಾಡಿರುವ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

## ಉತ್ತರ

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ಡಿಸಿಸಿ ಬ್ಯಾಂಕಿಗೆ 1998-99ನೇ ಸಾಲಿನಲ್ಲಿ ಅಂದಿನ ಆಡಳಿತ ಮಂಡಳಿಯವರು ವಿವಿಧ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ನೇಮಕಾತಿ ಮಾಡುವುದರಲ್ಲಿ ಅವ್ಯವಹಾರ ನಡೆದಿದ್ದು ಅಕ್ರಮ ನೇಮಕಾತಿಯ ಬಗ್ಗೆ ವಿಚಾರಣೆ ನಡೆಸಿ, ವರದಿ ಸಲ್ಲಿಸಲು, ನಿಬಂಧಕರ ಆದೇಶ ಸಂಖ್ಯೆ:ಆರ್‌ಸಿಎಸ್/ಸಿಆರ್‌ಡಿ/63/ಕೆಎಂಸಿ/1/2007-08, ದಿನಾಂಕ:27.12.2013ರ ರೀತ್ಯಾ ಸಹಕಾರ ಸಂಘಗಳ ಜಂಟಿ ನಿಬಂಧಕರು (ಐಸಿ.ಡಿ.ಪಿ), ಕೇಂದ್ರ ಕಛೇರಿ, ಬೆಂಗಳೂರುರವರನ್ನು ನೇಮಿಸಿದ್ದು, ಅದರನ್ವಯ ಸದರಿಯವರು ದಿನಾಂಕ:14.02.2014 ರಂದು ನಿಬಂಧಕರಿಗೆ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ವಯ ನೇಮಕಾತಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ಧೃಢಪಟ್ಟಿರುವುದಾಗಿ ವರದಿ ನೀಡಿರುವ ಮೇರೆಗೆ ಸಹಕಾರ ಸಂಘಗಳ ನಿಬಂಧಕರು, ಸದರಿ ನೇಮಕಾತಿಯಲ್ಲಿ ಅಕ್ರಮವಾಗಿ ನೇಮಕಗೊಂಡ 25 ಮಂದಿ ಅಭ್ಯರ್ಥಿಗಳನ್ನು ಸೇವೆಯಿಂದ ತೆಗೆದುಹಾಕಲು ಹಾಗೂ ಅಂದಿನ ಆಡಳಿತ ಮಂಡಳಿಯ 16 ಜನರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲು ಕ್ರಮ ಕೈಗೊಂಡು, ವರದಿ ನೀಡುವಂತೆ ದಿನಾಂಕ:17.06.2014 ರಂದು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ನಿರ್ದೇಶಿಸಿರುತ್ತಾರೆ.

ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ನಿಯಮಗಳನ್ನು ಉಲ್ಲಂಘಿಸಿ ನೇಮಕಾತಿ ಹೊಂದಿರುವ 25 ಜನ ಅಭ್ಯರ್ಥಿಗಳನ್ನು ಸೇವೆಯಿಂದ ತೆಗೆದುಹಾಕಲು ಮತ್ತು ಅಂದಿನ ಆಡಳಿತ ಮಂಡಳಿಯ 16 ಜನ ಸದಸ್ಯರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡುವ ಸಂಬಂಧ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರು ವರದಿಸಿರುವಂತೆ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ.

1. ಅಂದಿನ ಆಡಳಿತ ಮಂಡಳಿಯ 16 ಜನ ಸದಸ್ಯರ ವಿರುದ್ಧ ಕೋಲಾರ ನಗರದ ಗಲ್‌ಪೇಟೆ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಅಪರಾಧ ಸಂಖ್ಯೆ 0124/2014 ನ್ನು ದಿನಾಂಕ 11.08.2014 ರಂದು ದಾಖಲಿಸಲಾಗಿರುತ್ತದೆ. ಈ ಪೈಕಿ ಅಂದಿನ ಆಡಳಿತ ಮಂಡಳಿ ನಿದೇಶಕರಾದ ಶ್ರೀ ಎಲ್. ಜಯರಾಮ್ ಮತ್ತು ಶ್ರೀ ನಜೀರ್ ಅಹಮದ್ ಇವರು ಇಲಾಖಾಧಿಕಾರಿಗಳಾಗಿದ್ದು, ಪ್ರಸ್ತುತ ಸೇವೆಯಿಂದ ವಯೋನಿವೃತ್ತರಾಗಿರುತ್ತಾರೆ. ಉಳಿದ 14 ಮಂದಿ ಸದಸ್ಯರ ಪೈಕಿ ಶ್ರೀ ಎಸ್. ವೆಂಕಟಪತಿ, ಶ್ರೀ ಪಿ. ಬೈಯಣ್ಣ, ಶ್ರೀ ಬಿ.ಎಸ್. ರಾಮಲಿಂಗಾರೆಡ್ಡಿ, ಶ್ರೀ.ಎಂ.ಶ್ರೀನಿವಾಸಮೂರ್ತಿ, ಶ್ರೀ ಪಟೇಲ್ ಮುನಿರೆಡ್ಡಿ, ಶ್ರೀ ಬಿ. ಎಂ. ಕೃಷ್ಣಪ್ಪ ಹಾಗೂ ಶ್ರೀ ಕೆ. ಎ. ವಿಶ್ವನಾಥ ಶರ್ಮ ಇವರು ಮರಣ ಹೊಂದಿರುತ್ತಾರೆ.

2. ಅಕ್ರಮವಾಗಿ ನೇಮಕವಾಗಿರುವ 25 ಜನ ಸಿಬ್ಬಂದಿಗಳ ಪೈಕಿ 04 ಸಿಬ್ಬಂದಿಗಳನ್ನು ದಿನಾಂಕ:29.07.2015 ರಂದು ಸೇವೆಯಿಂದ ವಜಾಗೊಳಿಸಲಾಗಿರುತ್ತದೆ.
3. 4 ಜನ ಸಿಬ್ಬಂದಿಯನ್ನು ಸೇವೆಯಿಂದ ವಜಾಗೊಳಿಸಿದ ಆದೇಶವನ್ನು ಸದರಿ ನೌಕರರು ಪ್ರಶ್ನಿಸಿ ಗೌರವ ಉಚ್ಚನ್ಯಾಯಾಲಯದ ಮೊರೆ ಹೋಗಲಾಗಿ ನ್ಯಾಯಾಲಯವು ದಿನಾಂಕ 24.08.2015 ರಂದು ತಡೆಯಾಜ್ಞೆ ನೀಡಿರುತ್ತದೆ. (ರಿಟ್ ಪಿಟಿಷನ್ ಸಂಖ್ಯೆ: 34237-34240 / 2015 (ಸಿಎಸ್-ಆರ್.ಇ.ಎಸ್). ಇದರ ಆಧಾರದ ಮೇಲೆ ನೌಕರರನ್ನು ದಿನಾಂಕ:25.08.2015 ರಂದು ಸೇವೆಗೆ ಮರುನೇಮಕ ಮಾಡಿಕೊಳ್ಳಲಾಗಿರುತ್ತದೆ.
4. ನೇಮಕಗೊಂಡ 25 ಜನ ಸಿಬ್ಬಂದಿಗಳ ಪೈಕಿ ಸೇವೆಯಲ್ಲಿ ಮುಂದುವರೆದಿದ್ದ 21 ಸಿಬ್ಬಂದಿಗಳನ್ನು ದಿನಾಂಕ 31.08.2018 ರಂದು ಸೇವೆಯಿಂದ ವಜಾಗೊಳಿಸಲಾಗಿರುತ್ತದೆ.
5. 21 ಸಿಬ್ಬಂದಿಗಳ ಪೈಕಿ 20 ಸಿಬ್ಬಂದಿಗಳು ಬ್ಯಾಂಕು ಹೊರಡಿಸಿರುವ ವಜಾ ಆದೇಶವನ್ನು ಪ್ರಶ್ನಿಸಿ ಗೌರವ ಉಚ್ಚನ್ಯಾಯಾಲಯದ ಮೊರೆ ಹೋಗಲಾಗಿ ನ್ಯಾಯಾಲಯವು ದಿನಾಂಕ 17.09.2018 ರಂದು ತಡೆಯಾಜ್ಞೆ ನೀಡಿರುತ್ತದೆ. (ರಿಟ್ ಪಿಟಿಷನ್ ಸಂಖ್ಯೆ: 39712-39731/2018 (ಎಸ್-ಆರ್.ಇ.ಎಸ್) ಇದರ ಆಧಾರದ ಮೇಲೆ ನೌಕರರನ್ನು ಸೇವೆಯಲ್ಲಿ ಮುಂದುವರೆಸಲಾಗಿದೆ.
6. ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು) ರವರ ಪತ್ರ ಸಂಖ್ಯೆ: ಆರ್.ಸಿ.ಎಸ್/ಸಿ.ಆರ್.ಡಿ / ಕೆ.ಎಂ.ಇ-8/48/2018-19, ದಿನಾಂಕ 02.01.2019 ರಲ್ಲಿನ ಸೂಚನೆಯನುಸಾರ ದಿನಾಂಕ:30.01.2019 ರಂದು ಶ್ರೀ ಇ.ಎಸ್.ಇಂದಿರೇಶ್, ಅಪರ ಸರ್ಕಾರಿ ವಕೀಲರು, ಅಡ್ವೊಕೇಟ್ ಜನರಲ್ ಕಾರ್ಯಾಲಯ, ಬೆಂಗಳೂರು ಈ ಕಛೇರಿಗೆ ಕಂಡಿಕೆವಾರು ಷರಾ ಸಲ್ಲಿಸಲಾಗಿರುತ್ತದೆ.
7. ಅಕ್ರಮವಾಗಿ ನೇಮಕವಾಗಿರುವ 25 ಸಿಬ್ಬಂದಿಗಳ ಪೈಕಿ ಓರ್ವ ಸಿಬ್ಬಂದಿಯಾದ ಶ್ರೀ ಎ.ರಾಮಚಂದ್ರನ್ ರವರು ವಯೋನಿವೃತ್ತಿಯ ವಯಸ್ಸು ತಲುಪಿದ ಪ್ರಯುಕ್ತ ಘನ ನ್ಯಾಯಾಲಯದ ಅಂತಿಮ ತೀರ್ಪಿಗೆ ಕಾಯ್ದಿರಿಸಿ ಸೇವೆಯಿಂದ ದಿನಾಂಕ:30.04.2021 ರಂದು ವಯೋ ನಿವೃತ್ತಿಗೊಳಿಸಲಾಗಿದೆ.
8. ಸೇವೆಯಿಂದ ವಜಾಗೊಂಡ ಮತ್ತೋರ್ವ ಸಿಬ್ಬಂದಿಯಾದ ಶ್ರೀಮತಿ ಎಂ.ಸುಜಾತ ರವರು ಅವರ ವಜಾ ಆದೇಶವನ್ನು ಪ್ರಶ್ನಿಸಿ ಗೌರವ ಉಚ್ಚ ನ್ಯಾಯಾಲಯ, ಬೆಂಗಳೂರು, ಈ ನ್ಯಾಯಾಲಯದ ಮೊರೆ ಹೋಗಿರುತ್ತಾರೆ. ರಿಟ್ ಪಿಟಿಷನ್ ಸಂಖ್ಯೆ 54158/2018 ಆಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಂಡಿಕೆವಾರು ಷರಾ ದಿನಾಂಕ:31.05.2019 ರಂದು ಶ್ರೀ ಇ.ಎಸ್.ಇಂದಿರೇಶ್, ಅಪರ ಸರ್ಕಾರಿ ವಕೀಲರು, ಅಡ್ವೊಕೇಟ್ ಜನರಲ್ ಕಾರ್ಯಾಲಯ, ಬೆಂಗಳೂರುಇವರಿಗೆ ಸಲ್ಲಿಸಲಾಗಿರುತ್ತದೆ.

ನಿಬಂಧಕರ ದಿನಾಂಕ:16.04.2015ರ ಪತ್ರದಲ್ಲಿ ನಿರ್ದೇಶಿಸಿರುವಂತೆ ಅಕ್ರಮ ನೇಮಕಾತಿ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದ್ದಾಗ್ಯೂ ಯಾವುದೇ ಕ್ರಮವಾಗಿರುವುದಿಲ್ಲವೆಂದು ಹಾಗೂ ಬ್ಯಾಂಕಿನ ಆಡಳಿತ ಮಂಡಳಿ ಸರ್ಕಾರದ ನಿರ್ದೇಶನವನ್ನು ಉಲ್ಲಂಘಿಸಿರುವುದರಿಂದ ಅಂದಿನ ಆಡಳಿತ ಮಂಡಳಿ ವಿರುದ್ಧ ಕಾಯ್ದೆ, ಕಲಂ.29ಸಿ ರಡಿಯಲ್ಲಿ ಕ್ರಮವಿಡಲು ಸೂಚಿಸಲಾಗಿರುತ್ತದೆ.

ಇದರನ್ವಯ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತರವರ ಕಛೇರಿಯಲ್ಲಿ ಪ್ರಕರಣ ಸಂಖ್ಯೆ:ಜೆಆರ್‌ಬಿ/ದಾವಾ/29-ಸಿ/02/2015-16, ದಿನಾಂಕ:27.11.2015 ರಂದು ಸಂಬಂಧಪಟ್ಟ ಆಡಳಿತ ಮಂಡಳಿಯ ಎಲ್ಲಾ ಸದಸ್ಯರ ವಿರುದ್ಧ ನೋಟೀಸ್ ನೀಡಿ, ವಿವಿಧ ದಿನಾಂಕಗಳಲ್ಲಿ ಅವಕಾಶ ನೀಡಿ, ವಿಚಾರಣೆ ನಡೆಸಿದ್ದು, ಪೀಠಾಧಿಕಾರಿಗಳು ಬದಲಾವಣೆಯಾಗಿರುವ ಹಿನ್ನೆಲೆಯಲ್ಲಿ ಪ್ರತಿವಾದಿಗಳಿಗೆ ಮರುವಾದ ಮಂಡನೆಗೆ ಅವಕಾಶ ನೀಡಿ, ಪ್ರಕರಣಗಳನ್ನು ದಿನಾಂಕ:24.12.2021ಕ್ಕೆ ನಿಗಧಿಪಡಿಸಲಾಗಿರುತ್ತದೆ.

-3..

**<u>ಸರ್ಕಾರದಿಂದ ಹೆಚ್ಚಿನ ಬಡ್ಡಿಯನ್ನು ಕ್ಲೈಂ ಮಾಡಿರುವ ಬಗ್ಗೆ :</u>**

ಸರ್ಕಾರ ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳಲ್ಲಿ ನಿಗಧಿಪಡಿಸಿರುವಂತೆ ಕ್ರಮಗಳನ್ನು ಅನುಸರಿಸಿ ಬಡ್ಡಿ ಸಹಾಯಧನದ ಕ್ಲೈಂ ಬಿಲ್ಲುಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಸರ್ಕಾರ ನಿಗಧಿಪಡಿಸಿರುವ ಬಡ್ಡಿಗಿಂತ ಹೆಚ್ಚಿಗೆ ಬಡ್ಡಿ ಕ್ಲೈಂ ಮಾಡಿರುವ ಬಗ್ಗೆ ಪರಿಶೀಲಿಸಿ, ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಸಲ್ಲಿಸಿರುವ ಪರಿಶೀಲನಾ ವರದಿಯಲ್ಲಿ ಸರ್ಕಾರದಿಂದ ಬಡ್ಡಿ ಸಹಾಯಧನ ಕ್ಲೈಂ ಮಾಡುವಾಗ ಕ್ರಮಬದ್ಧವಾಗಿ ಸಲ್ಲಿಸದೇ ಇರುವ ಅಂಶವನ್ನು ಪ್ರಸ್ತಾಪಿಸಿ, ವರದಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಈ ಕುರಿತು ಸತ್ಯಾಸತ್ಯತೆಯನ್ನು ಪರಿಶೀಲಿಸಲು ನಿಬಂಧಕರ ಆದೇಶ ಸಂಖ್ಯೆ:ಜೆಆರ್‌ಸಿಎಸ್/ಡಿಸಿಸಿಬಿ/ಕಲಂ.65/01/2021–22, ದಿನಾಂಕ:18.11.2021ರ ರೀತ್ಯಾ ಕಾಯ್ದೆ, ಕಲಂ.65 ರಡಿ ಶಾಸನಬದ್ಧ ಪರಿವೀಕ್ಷಣೆ ಜರುಗಿಸುವ ಬಗ್ಗೆ ಸಹಕಾರ ಸಂಘಗಳ ಉಪ ನಿಬಂಧಕರು 4ನೇ ವಲಯ ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಇವರನ್ನು ಪರಿವೀಕ್ಷಣಾಧಿಕಾರಿಯಾಗಿ ನೇಮಕ ಮಾಡಲಾಗಿದ್ದು, ಪರಿವೀಕ್ಷಣಾ ವರದಿಯು ನಿರೀಕ್ಷೆಯಲ್ಲಿರುತ್ತದೆ.

---

**ಕಡತ ಸಂಖ್ಯೆ ಸಿಒ 176 ಸಿಸಿಬಿ 2021**

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು